ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳನ್ನು ವಜಾ ಮಾಡ ಬೇಕು, ಇದರಿಂದ ಸಿಕ್ಕಾಪಟ್ಟೆ ಸರ್ಕಾರದ ಹಣ ಖರ್ಚಾಗುತ್ತಿದೆ, ಇದೊಂದು ಸರ್ಕಾರಕ್ಕೆ ದೊಡ್ಡ ಹೊರೆಯೆಂದು ಅನೇಕ ಸಂಸ್ಥಾನಗಳ ಮುಖ್ಯ ಮಂತ್ರಿಗಳು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಲ್. ಗೌಡ.—ರಾಜ್ಯ ಸರ್ಕಾರಗಳ ಮುಖ್ಯ ಮಂತ್ರಿಗಳು ಮತ್ತು ಅಭಿವೃದ್ಧಿ ಯೋಜನೆಯ ಅಧಿಕಾರಿಗಳು ಅಲ್ಲಿಗೆ ಹೋಗಿದ್ದರು. ಅವರು ಅಲ್ಲ ಕಾರ್ಯ ನೀತಿಯನ್ನು ಪರಿಶೀಲಿಸಿ ದ್ದಾರೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಅಭಿವೃದ್ಧಿ ಯೋಜನೆಗಳ ಬಗ್ಗೆ ಎವ್ಯಾಲ್ಯುಯೇಷನ್ ನಮ್ಮ ದೇಶದಲ್ಲಿ ಆಗಿದೆಯೇ ?

ಶ್ರೀ ಬಿ. ಎಲ್. ಗೌಡ.—ಎವ್ಯಾಲ್ಯುಯೇಷನ್ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಹೇಳು ತ್ತೇನೆ.

ಶ್ರೀ ಜಿ. ರಾಮೇಗೌಡ.—ಮದ್ರಾಸಿನಲ್ಲಿ ನಡೆದಂಥ ರಾಜ್ಯ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಸಹಕಾರ ಸಂಘಗಳಲ್ಲಿ ಅಧ್ಯಕ್ಷರ ವಿಚಾರವಾಗಿ ಏನಾದರೂ ತೀರ್ಮಾನ ತೆಗೆದುಕೊಂಡಿದ್ದಾರೆಯೇ ?

ಶ್ರೀ ಬಿ. ಎಲ್. ಗೌಡ.—ಅಲ್ಲಿ ನಡೆದಂಥ ಸಮ್ಮೇಳನದಲ್ಲಿ ಸಹಕಾರ ಸಂಘಗಳಲ್ಲಿ ಖಾಯಂ ಆಗಿ ಎರಡು ವರ್ಷಗಳು ಒಬ್ಬರೇ ಅಧ್ಯಕ್ಷರು ಇರದಾರದು, ಅವರು ಒಂದಕ್ಕಿಂತ ಹೆಚ್ಚು ಸಹಕಾರ ಸಂಘಗಳಲ್ಲಿ ಅಧ್ಯಕ್ಷರಾಗಿ ಇರದಾರದೆಂದು ಮಾಡಿರುವ ಶಿಫಾರಸ್ಸನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅದರ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಳ್ಳಲಲ್ಲ.

Sri J. P. SARWESH.—May I know why the issue of delimitation of Taluk Board constituencies was not discussed particularly when it is said that this should not be left to the officials who are afraid to act freely and independently ?

Sri B. L. GOWDA.—It does not pertain to this question.

Sri J. P. SARWESH.—Was this question taken up ?

Sri B. L. GOWDA.—No decision is taken regarding this in that conference.

ಶ್ರೀ ಕೆ. ಎಚ್. ಪಾಟೀಲ್.—ಮದ್ರಾಸ್‌ನಲ್ಲಿ ನಡೆದಂಥ ಸಮ್ಮೇಳನದಲ್ಲಿ ಸಹಕಾರ ಸಂಘಗಳಲ್ಲಿ ಎರಡು ವರ್ಷ ಸರ್ವಿಸ್ ಆದಮೇಲೆ ಅವರನ್ನು ನಿವೃತ್ತಿ ಮಾಡಬೇಕೆಂದು ತೀರ್ಮಾನ ಮಾಡಿದ್ದಾ ರೆಂದು ಹೇಳಿದ್ದೀರಿ. ಅಂದಮೇಲೆ ಅಂತಹ ಅಧ್ಯಕ್ಷರಿಗೆ ನಿವೃತ್ತಿ ವೇತನವನ್ನು ಕೊಡುವುದನ್ನು ಸರ್ಕಾರದವರು ಪರಿಶೀಲಿಸುತ್ತಾರೆಯೇ ?

ಶ್ರೀ ಬಿ. ಎಲ್. ಗೌಡ.—ಅದನ್ನು ಇನ್ನೂ ಸರ್ಕಾರ ಪರ್ಯಾಲೋಚನೆ ಮಾಡುತ್ತಿದೆ. ಅದರ ಬಗ್ಗೆ ಇನ್ನೂ ಏನೂ ತೀರ್ಮಾನ ತೆಗೆದುಕೊಂಡಿಲ್ಲ.

Private School in Gajendragad

80. Sri S. S. SHETTAR (Hubli).—

Will the Minister for Education be pleased to state :—

(*a*) whether private Schools in Gajendragad, Dharwar District have been taken over by the District School Board, Dharwar ;

(SRI S. S. SHETTAR)

(*b*) if so, whether the Government have considered the service of the teachers serving in these private schools after they have been taken over by the District School Board;

(*c*) whether these teachers are selected for training even though they have a lot of teaching experience?

A.—Sri K. V. SHANKARA GOWDA (Minister for Education).—

(*a*) No.

(*b*) and (*c*) Do not arise in view of reply to clause (*a*) above.

ಶ್ರೀ ಎಸ್. ಎಸ್. ಶೆಟ್ಟರ್.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ ಹಾಗಿದ್ದ ಪಕ್ಷದಲ್ಲಿ ಶಿಕ್ಷಕರಿಂದ 20-3-1968ರಿಂದ ಮನವಿಗಳು ಏನಾದರೂ ಬಂದಿವೆಯೇ?

†ಶ್ರೀ ಕೆ. ವಿ. ಶಂಕರಗೌಡ.—ಆ ಶಾಲೆಗಳನ್ನು ಅವರು ವಹಿಸಿಕೊಳ್ಳುವುದಕ್ಕಾಗುವುದಿಲ್ಲ. ಆ ಶಾಲೆಗಳನ್ನು ಖಾಸಗಿ ಸಂಸ್ಥೆಯವರು ಮುಚ್ಚುತ್ತಾರೆ. ಬೇರೆ ಸ್ಕೂಲ್ ಬೋರ್ಡಿನವರು ಪ್ರಾರಂಭಮಾಡುತ್ತಾರೆ. ಆದ್ದರಿಂದ ಅವನ್ನು ಅವರು ವಹಿಸಿಕೊಳ್ಳುವ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಎಸ್. ಎಸ್. ಶೆಟ್ಟರ್.—ಹಾಗಿದ್ದಮೇಲೆ, ಈ ಖಾಸಗೀ ಶಾಲೆಗಳಲ್ಲಿ ಏನು ಕೆಲಸ ಮಾಡುತ್ತಿದ್ದಾರೆ, ಆ ಶಿಕ್ಷಕರ ಅವರ ಹಿಂದಿನ ಸರ್ವೀಸನ್ನು ಗಮನಕ್ಕೆ ತೆಗೆದುಕೊಂಡು ಅವರ ಸೀನಿಯಾರಿಟಿಯನ್ನು ಕೊಡುವ ಬಗ್ಗೆ ವಿಚಾರ ಮಾಡುತ್ತೀರಾ?

ಶ್ರೀ ಕೆ. ವಿ. ಶಂಕರಗೌಡ.—ಹಳೆಯ ಶಾಲೆಗಳನ್ನು ಮುಚ್ಚಿ ಅವುಗಳ ಸ್ಥಾನದಲ್ಲಿ ಹೊಸ ಶಾಲೆಗಳನ್ನು ಪ್ರಾರಂಭ ಮಾಡಿದಾಗ, ಅಲ್ಲಿರತಕ್ಕ ಉಪಾಧ್ಯಾಯರನ್ನು ಬೊಂಬಾಯಿ ಎಜುಕೇಷನ್ ಆಕ್ಟ್ ಪ್ರಕಾರ ಹೊಸ ಸ್ಕೂಲುಗಳಲ್ಲಿ ನೇಮಕ ಮಾಡಲಾಗುತ್ತದೆ. ಹಾಗೆ ಅವರನ್ನು ನೇಮಕ ಮಾಡಿದಾಗ ಅವರು ಹೊಸಬರಾಗುತ್ತಾರೆ. ಅವರ ಹಿಂದಿನ ಸರ್ವೀಸನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಸ್. ಎಸ್. ಶೆಟ್ಟರ್.—ಎಷ್ಟೋ ವರ್ಷಗಳ ಸರ್ವೀಸ್ ಮಾಡಿದಂತಹ ಉಪಾಧ್ಯಾಯರ ಸರ್ವೀಸನ್ನು ಗಣನೆಗೆ ತೆಗೆದುಕೊಳ್ಳದೆ, ಅವರನ್ನು ಹೊಸಬರು ಎಂದು ಗಣನೆಗೆ ತೆಗೆದುಕೊಂಡು ಪುನಃ ಅವರನ್ನು ಶಿಕ್ಷಕರ ತರಪೇತಿಯನ್ನು ಪಡೆಯುವುದರ ನಲುವಾಗಿ ಕಳುಹಿಸುತ್ತಿದ್ದಾರೆ ಎನ್ನುವ ಮಾತು ಕೇಳಿ ಬರುತ್ತಿದೆ. ಇದು ತಮ್ಮ ಗಮನಕ್ಕೆ ಬಂದಿದೆಯೇ, ಇದರಿಂದ ಅನೇಕರಿಗೆ ತೊಂದರೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ವಿ. ಶಂಕರಗೌಡ.—ತೊಂದರೆಯೇನೂ ಇಲ್ಲ. ಆ ರೀತಿ ಅವರನ್ನು ಹೊಸದಾಗಿ ಕೆಲಸಕ್ಕೆ ತೆಗೆದುಕೊಳ್ಳತಕ್ಕಂಥಾದ್ದೇ ಒಂದು ದೊಡ್ಡ ಉಪಕಾರ. ಶಿಕ್ಷಕರ ತರಪೇತಿಯನ್ನು ಪಡೆಯದೇ ಇರತಕ್ಕವರು ಆ ರೀತಿ ತರಪೇತಿಯನ್ನು ಪಡೆಯತಕ್ಕದ್ದು ಅವಶ್ಯಕ.

Term of Municipalities

81. Sri ABDUL KHUDDUS ANWAR (Bhadravathi).—

Will the Minister for Labour be pleased to state :—

(*a*) the reason for appointing the Administrator to Bhadravathi Municipality although the Deputy Commissioner, Shimoga District in his recommendation dated 13th June 1968 has recommended for the extension of the term of Bhadravathi Municipality;